ಒ.ಎಸ್. - 07/2018

ಡಿ.ಡಬ್ಲ್ಯು - 04

**ದಿನಾಂಕ 03-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 4 ನೇ ಪ್ರತಿವಾದಿಯರ ಪರ ಶ್ರೀ ಡಿಎಸ್ ವಕೀಲರಿಂದಃ**

OS No. 31/2022 ರಲ್ಲಿ ಕೂಡ ನಾನು ವೀಲುನಾಮೆ ಅಂದರೆ ನಿಡಿ 14 ದಾಖಲೆ ಬಗ್ಗೆ ಸದ್ರಿ ನ್ಯಾಯಲಯದಲ್ಲಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಿಡಿ 16 ರ ಶೀರ್ಷಿಕೆಯಲ್ಲಿ ಕಾಣುವ ಜೆಫ್ರಿ ಡಿಸೋಜ ಎಂದರೆ ನಾನೇ . ನಿಡಿ 16 ರಲ್ಲಿ ಕಾಣುವ ಆಸ್ತಿಗಳಲ್ಲಿ ನಾನು ಸ್ವಾಧೀನದಲ್ಲಿ ಇರಲಿಲ್ಲ . ವಸಂತ ಕುಮಾರ್ ಬಳಿ ನಿಡಿ 16 ರಲ್ಲಿ ಕಾಣುವ ಆಸ್ತಿ ನಮಗೆ ಸೇರಿದ್ದು ಎಂದು ಹೇಳಿಲ್ಲ . ನಿಡಿ 16 ರಲ್ಲಿ ಕಾಣುವ ಆಸ್ತಿಗೆ ಅಕ್ರಮ ಪ್ರವೇಶ ಮಾಡಲು ನಾನು ಪ್ರಯತ್ನ ಪಟ್ಟಿಲ್ಲ . OS No. 31/2022 ರಲ್ಲಿ ನನ್ನ ವಿರುದ್ಧ ಯಾವ ಕಾರಣಕ್ಕಾಗಿ ದಾವೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ . OS No. 31/2022 ರಲ್ಲಿ ನಾನು ಪ್ರತಿವಾದ ಪತ್ರ ಹಾಕಿರುತ್ತೇನೆ ಎಂದರೆ ಸರಿ . ಸಾಕ್ಷಿಗೆ ಒಂದು ಪ್ರತಿವಾದ ಪತ್ರದ ಪ್ರತಿ ತೋರಿಸಲಾಗಿ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ 19 ಎಂದು ಗುರುತಿಸಲಾಯಿತು. ನಿಡಿ 19 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಕಾರಣ ಅದು ಇಂಗ್ಲೀಷ್ ನಲ್ಲಿ ಬರೆದಿರುತ್ತದೆ. ನಿಡಿ-19 ನ್ನು ನಮ್ಮ ವಕೀಲರಾದ ಇಕ್ಬಾಲ್ ತಯಾರಿಸಿರುತ್ತಾರೆ . ನಿಡಿ 14 ವಿಲ್ ತಯಾರಿಸಿದ ವಕೀಲರೇ ಅಸಲು ದಾವಾ ಸಂಖ್ಯೆ 31/2022 ರಲ್ಲಿ ನನ್ನ ಪರವಾಗಿ ವಕೀಲರಾಗಿ ನೇಮಕಗೊಂಡಿದ್ದರು ಮತ್ತು ಅವರೇ ಪ್ರತಿವಾದ ಪತ್ರವನ್ನು ತಯಾರಿಸಿರುತ್ತಾರೆ. ಸಾಕ್ಷಿಗೆ ಅವರು ಕೊಟ್ಟ ಹೇಳಿಕೆಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ14(ಎಫ್) ಎಂದು ಗುರುತಿಸಲಾಯಿತು. ನಿಡಿ-14 ಎಫ್ ಬಗ್ಗೆ ನನ್ನ ಇತರೆ ಯಾವುದೇ ಸಮಜಾಯಿಷಿ ಇರುವುದಿಲ್ಲ. ಅದನ್ನು ಸಾಕ್ಷಿ ಓದಿ ನೋಡಿ ಅದರ ಬಗ್ಗೆ ನನ್ನ ಯಾವುದೇ ಸಮಜಾಯಿಷಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ವೀಲುನಾಮೆ ಇದೆ ಎಂದು ವಸಂತ್ ಕುಮಾರ್ ಗೆ ಹೇಗೆ ಗೊತ್ತಾಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಕೀಲರಾದ ಇಕ್ಬಾಲ್ ಹೇಳಿರುತ್ತಾರೆ ಎಂದು ತಿಳಿಸಿರುತ್ತಾರೆ . 2019 ರಲ್ಲಿ ವಕೀಲರಾದ ಇಕ್ಬಾಲ್ ರವರು ವಿಲ್ ಬಗ್ಗೆ ವಸಂತ್ ಕುಮಾರ್ ಗೆ ಹೇಳಿರುತ್ತಾರೆ . ನಾನು ವಸಂತ್ ಕುಮಾರ್ ಜೊತೆ ವಕೀಲರಾದ ಇಕ್ಬಾಲ್ ಕಚೇರಿಗೆ ಹೋಗಿಲ್ಲ.

ವಕೀಲರಾದ ಇಕ್ಬಾಲ್ ರವರೇ ಸಬ್ ರಿಜಿಸ್ಟ್ರಾರ್ ಕಚೇರಿಗೆ ವಿಲ್ ನೊಂದಾವಣೆ ಮಾಡಿಸಲು ಬರಲು ನನಗೆ ಹೇಳಿದ್ದರು . ಸಬ್ ರಿಜಿಸ್ಟ್ರಾರ್ ಕಚೇರಿಗೆ ನಾನು ಒಬ್ಬನೇ ಹೋಗಿದ್ದೆ . ವಕೀಲರಾದ ಮಾದವ ಆಚಾರ್ ರವರ ಕಚೇರಿಯಲ್ಲಿ ವೀಲುನಾಮೆಯನ್ನು ಮೋಹನ್ ಪೈ ರವರು ಬರೆಯಿಸಿಲ್ಲ. ನಿಡಿ 14 ವೀಲುನಾಮೆ ಆಗುವಾಗ ನಾನು ವಕೀಲರಾದ ಇಕ್ಬಾಲ್ ರವರ ಕಚೇರಿಯ ಹೊರಭಾಗದಲ್ಲಿ ಇದ್ದೆ . ವಕೀಲರ ಕಚೇರಿಯ ಒಳಗೆ ಏನಾಯಿತು ಎಂದು ಗೊತ್ತಿಲ್ಲ. ಬರೆದ ನಂತರ ನಾನು ಓದಿ ಸಹಿ ಮಾಡಿರುತ್ತೇನೆ . ನಾನು ಸಹಿ ಮಾಡಿದ್ದನ್ನು ಬಿಟ್ಟರೇ ಮತ್ತು ನೊಂದಾವಣೆ ಬಗ್ಗೆ ಬಿಟ್ಟರೇ ನನಗೆ ಬೇರೆ ವಿಚಾರ ಗೊತ್ತಿಲ್ಲ .

ಮೋಹನ್ ಪೈ ರವರ ಜೀವಿತ ಕಾಲದಲ್ಲಿ ಈ ದಾವೆಯ 3 ನೇ ಪ್ರತಿವಾದಿ ಶ್ರೀನಿವಾಸ್ ಪೈ ರವರು ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ . ಮೋಹನ್ ಪೈ ರವರು 2 ನೇಪ್ರತಿವಾದಿ ಸದಾನಂದ ರವರಿಗೆ ಜಿಪಿಎ ಕೊಟ್ಟು ಸದಾನಂದ ರವರ ಮುಖೇನ 3 ನೇ ಪ್ರತಿವಾದಿ ಹೆಸರಿಗೆ ದಾನ ಮಾಡಿಸಿದ್ದರು ಎಂದರೆ ಸರಿಯಲ್ಲ. ಮೋಹನ್ ಪೈ ಮತ್ತು ವನಜಾ ಪೈ ರವರು ದಾನ ಮಾಡಿದ ನಂತರ ದಾವಾ ಸ್ವತ್ತಿನಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಆನಂತರ 3 ನೇ ಪ್ರತಿವಾದಿ ದಾವಾ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ 3 ನೇಪ್ರತಿವಾದಿ ಶ್ರೀನಿವಾಸ್ ರವರ ಪರಿಚಯ ಇಲ್ಲ ಮತ್ತು ನಾನು ಅವರನ್ನು ನೋಡಿಲ್ಲ . ಮೋಹನ್ ಪೈ ಮತ್ತು ವನಜಾ ಪೈ ರವರು ಉಡುಪಿಯ ಬಸ್ ಸ್ಟ್ಯಾಂಡ್ ನ ಪಕ್ಕದಲ್ಲಿ ವಾಸವಾಗಿದ್ದರು . ಮೋಹನ್ ಪೈ ಮತ್ತು ವನಜಾ ಪೈ ರವರು ವಾಸ ಇದ್ದ ಸ್ಥಳಕ್ಕೆ ಕಾಡುಬೆಟ್ಟು ಎಂದು ಹೇಳುತಿದ್ದರು. ಮೋಹನ್ ಪೈ ರವರು ಸದರಿ ಮನೆಯನ್ನು ಬಾಡಿಗೆಗೆ ಪಡೆದಿದ್ದರು. ಮೋಹನ್ ಪೈ ರವರು ಬಾಡಿಗೆಗೆ ಇದ್ದ ಮನೆ ಒಬ್ಬ ಆಚಾರ್ ಎನ್ನುವವರಿಗೆ ಸೇರಿರುತ್ತದೆ.

ನನ್ನ ಮುಖ್ಯವಿಚಾರಣೆಯ ಪ್ಯಾರಾ 3 ರಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ . ನನ್ನ ಮುಖ್ಯವಿಚಾರಣೆಯ ಪ್ಯಾರಾ 3 ರಲ್ಲಿ ಹೇಳಿರುವ ವ್ಯಕ್ತಿಗಳು ಮೋಹನ್ ಪೈ ರವರನ್ನು ಆರೈಕೆ ಮಾಡಿಲ್ಲ ಎಂದರೆ ಸರಿಯಲ್ಲ. ಮೋಹನ್ ಪೈ ರವರ ಅಂತ್ಯಕ್ರೀಯೇಯನ್ನು ವಸಂತ್ ಕುಮಾರ್ ಮಾಡಿರುತ್ತಾರೆ . ಮೋಹನ್ ಪೈ ರವರ ಸಂಬಂಧಿಕರು ಯಾರು ಕೂಡ ಮೋಹನ್ ಪೈ ರವರ

ಅಂತ್ಯಕ್ರೀಯೆಗೆ ಬರಲಿಲ್ಲ . ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಮೋಹನ್ ಪೈ ರವರನ್ನು ವಕೀಲರಾದ ಮಾದವ ಆಚಾರ್ ಕಚೇರಿಗೆ ಕರೆದುಕೊಂಡು ಹೋಗಿದ್ದೆ ಆಗ ಅವರು ಇರಲಿಲ್ಲ . ನಾವು ವಿಲ್ ಬರೆಸಲು ಹೋಗಿದ್ದೆವು ಬೇರೆ ಯಾವುದೇ ಕಾರಣಕ್ಕೆ ಹೋಗಿರಲಿಲ್ಲ . ಮಾದವ ಆಚಾರ್ ಆ ದಿನ ಇಲ್ಲದೇ ಇದ್ದುದರಿಂದ ಅವರ ಜೊತೆ ಯಾವುದೇ ಮಾತುಕತೆ ಆಗಿಲ್ಲಿ. ಅದೇ ದಿನ ವಕೀಲರಾದ ಇಕ್ಬಾಲ್ ರವರ ಕಚೇರಿಗೆ ಹೋದೆವು ನಂತರ ಮಾದವ ಆಚಾರ್ ರವರನ್ನು ನಾವು ಸಂಪರ್ಕಿಸಿಲ್ಲ . ಕಾಡುಬೆಟ್ಟು ವಿನಲ್ಲಿ ಮನೆಯನ್ನು ನಾನು ಮಾಡಿಕೊಟ್ಟಿಲ್ಲ . ನನ್ನ ಮುಖ್ಯವಿಚಾರಣೆಯ ಪ್ಯಾರಾ 3 ರಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಮೋಹನ್ ಪೈ ತೀರಿಕೊಂಡ ತಾರೀಖು ನನಗೆ ನೆನಪಿಲ್ಲ . ನಾನು , ವಸಂತ್ ಕುಮಾರ್ ಮತ್ತು ವಕೀಲರಾದ ಇಕ್ಬಾಲ್ ರವರು ಸೇರಿಕೊಂಡು ನಿಡಿ 14 ವೀಲುನಾಮೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**ಪಾಟೀ ಸವಾಲು ಃ 5 ನೇ ಪ್ರತಿವಾದಿ ಪರ ವಕೀಲರಿಂದ**

3 ನೇ ಪ್ರತಿವಾದಿರವರು ದಾವಾ ಶೆಡ್ಯೂಲ್ ಆಸ್ತಿಗಳ ಕೆಲವು ಅಂಶಗಳನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಈಗಲೂ ಕೂಡ 5 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ . ವಸಂತ್ ಕುಮಾರ್ ರವರ ಪರಿಚಯ 10 ವರ್ಷಗಳಿಂದ ಇದೆ . ನನಗೆ ಪರಿಚಯವಾಗುವ 10 ವರ್ಷಗಳ ಮೊದಲು ವಸಂತ್ ಕುಮಾರ್ ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಸಂತ್ ಕುಮಾರ್ ಬಗ್ಗೆ ಮೋಹನ್ ಪೈ ಹೇಳುತಿದ್ದರು ಎಂದು ತಿಳಿಸಿರುತ್ತಾರೆ. ನನಗೆ ಅವರು ಪರಿಚಯವಾಗುವ ಮೊದಲು ಅವರ ಮುಖ ಪರಿಚಯ ಇರಲಿಲ್ಲ. ಉಳಿದ ಪಾಟೀ ಸವಾಲನ್ನು 4 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ .

**ಮರು ವಿಚಾರಣೆ - ಇಲ್ಲ.**

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು , ನೀಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಒ.ಎಸ್.  - 07/2018

ಡಿ.ಡಬ್ಲ್ಯು - 04

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.